# ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ

ಜಗದ್ಗುರು ಡಾ॥ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು–570 004

ವಿಭಾಗ ........ಕನ್ನಡ................................

16 - 01 - 2023

20 – 20

ವಿಷಯ : ಮೈಸೂರು ವಿವಿ ಪ್ರಸಾರಾಂಗ ಮತ್ತು ಕಾಲೇಜು ವತಿಯಿಂದ ಆಯೋಜಿಸಿದ್ದ "ಶಾಸನಗಳ ಮಹತ್ವ ಕುರಿತ" ಪ್ರಸಾರೋಪನ್ಯಾಸ ಮಾಲೆ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ವರದಿ.

**JSS ENTERPRISES**
JSS Public School Campus
Dr. RadhaKrishna Nagara
Teachers Layout, Mysuru-570 029

ಶಾಸನಗಳ ಮಹತ್ವ ಕುರಿತ ಪ್ರಚಾರೋಪನ್ಯಾಸ ಮಾಲೆ ಕಾರ್ಯಕ್ರಮದ ಉದ್ಘಾಟನೆ.

16-01-2023



# ಮೈಸೂರು ವಿಶ್ವವಿದ್ಯಾನಿಲಯ
## ಪ್ರಸಾರಾಂಗ
ಹಾಗೂ
# ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
## ಊಟಿ ರಸ್ತೆ, ಮೈಸೂರು
ಇವರ ಸಂಯುಕ್ತ ಆಶ್ರಯದಲ್ಲಿ
# ಪ್ರಚಾರೋಪನ್ಯಾಸ

ದಿನಾಂಕ : 16.01.2023 ಸೋಮವಾರ

ಸಮಯ : 11.00

ಸ್ಥಳ : ಕಾಲೇಜು ಸಭಾಂಗಣ

ಪ್ರಾಸ್ತಾವಿಕ : **ಪ್ರೊ. ಎಂ. ನಂಜಯ್ಯ ಹೊಂಗನೂರು**
ನಿರ್ದೇಶಕರು
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಅಧ್ಯಕ್ಷತೆ : **ಪ್ರೊ. ಬಿ.ವಿ. ಸಾಂಬಶಿವಯ್ಯ**
ಮುಖ್ಯ ಕಾರ್ಯನಿರ್ವಾಹಕರು
ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು

ಉಪನ್ಯಾಸ : **ಪ್ರೊ. ಎನ್.ಎಸ್. ತಾರಾನಾಥ್**
ಪ್ರಸಿದ್ಧ ವಿದ್ವಾಂಸರು ಹಾಗೂ
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ವಿಷಯ : **ಶಾಸನಗಳ ಮಹತ್ವ**

ಉಪಸ್ಥಿತಿ : **ಪ್ರೊ. ಎಂ.ಪಿ. ವಿಜಯೇಂದ್ರ ಕುಮಾರ್**
ಪ್ರಾಂಶುಪಾಲರು
ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು

## ಸರ್ವರಿಗೂ ಆತ್ಮೀಯ ಸ್ವಾಗತ

**ಪ್ರೊ. ಬಿ.ವಿ. ಸಾಂಬಶಿವಯ್ಯ**
ಮುಖ್ಯ ಕಾರ್ಯನಿರ್ವಾಹಕರು
ಜೆಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಮೈಸೂರು

**ಪ್ರೊ. ಎಂ. ನಂಜಯ್ಯ ಹೊಂಗನೂರು**
ನಿರ್ದೇಶಕರು
ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು – 570 025
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
h: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

ದಿನಾಂಕ 16.01.2023

**ಪತ್ರಿಕಾ ಪ್ರಕಟಣೆಗಾಗಿ**

**ಇತಿಹಾಸದ ನಿರ್ಮಾಣದಲ್ಲಿ ಶಾಸನಗಳ ಪಾತ್ರ ಮಹತ್ವದ್ದು – ಪ್ರೊ. ಎನ್.ಎಸ್. ತಾರಾನಾಥ್**

ಶಾಸನಗಳೆಂದರೆ ಬರೆಹಗಳನ್ನು ಓದುವ ಶಾಸ್ತ್ರ. ಈಜಿಪ್ಟ್, ಭಾರತ, ಚೀನಾ ಇವೇ ಮೊದಲಾದ ದೇಶಗಳಲ್ಲಿ ಚಾರಿತ್ರಿಕ ಸಾಮಾಗ್ರಿಗಳು ದೊರೆತಿವೆ. ಅವುಗಳಲ್ಲಿ ನಾಣ್ಯಗಳು, ಶಿಲ್ಪ, ತಾಮ್ರಪಟಗಳು ಮೊದಲಾದವುಗಳು. ಮೌಖಿಕ ಇತಿಹಾಸದಲ್ಲಿ ಘಟನೆಗಳಷ್ಟೇ ಇರುತ್ತವೆ. ಕಾಲದ ನಿಖರತೆಯನ್ನು ಅವು ತಿಳಿಸುವುದಿಲ್ಲ. ಶಾಸನಗಳು ನಂಬಲರ್ಹವಾದ ವಿಚಾರಗಳನ್ನಷ್ಟೇ ನೀಡುತ್ತವೆ. ಆದ್ದರಿಂದ ಇತಿಹಾಸ ನಿರ್ಮಾಣದಲ್ಲಿ ಶಾಸನಗಳ ಪಾತ್ರ ಮಹತ್ವದ್ದು ಎಂದು ಪ್ರೊ. ಎನ್.ಎಸ್. ತಾರಾನಾಥ್ ಅವರು ಅಭಿಪ್ರಾಯಿಸಿದರು.

ದಿನಾಂಕ 16.01.2023 ರಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಮತ್ತು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಪ್ರಚಾರೋಪನ್ಯಾಸ ಮಾಲೆಯ ಭಾಗವಾಗಿ ಏರ್ಪಡಿಸಲಾಗಿದ್ದ 'ಶಾಸನಗಳ ಮಹತ್ವ'ವನ್ನು ಕುರಿತಾದ ವಿಶೇಷೋಪನ್ಯಾಸದಲ್ಲಿ ಪ್ರೊ. ಎನ್.ಎಸ್. ತಾರಾನಾಥ್ ಅವರು ಮಾತಾನಾಡುತ್ತಾ ಇತಿಹಾಸದಲ್ಲಿ ಉತ್ಪ್ರೇಕ್ಷೆಯ ಅಂಶಗಳು ಇರುವ ಸಾಧ್ಯತೆಗಳಿವೆ. ಅದೇ ಶಾಸನಗಳಲ್ಲಿ ಉತ್ಪ್ರೇಕ್ಷೆಯ ಅಂಶಗಳು ಕಂಡುಬರುವುದಿಲ್ಲ. ಸಾಕ್ಷಾತ್ತಾದ, ಪ್ರತ್ಯಕ್ಷವಾದ ಕುರುಹುಗಳೇ ಇರುತ್ತವೆ. ಶಾಸನಗಳನ್ನು ಬರೆಸಲು ಅಧಿಕೃತ ಒಪ್ಪಿಗೆ ಇರಬೇಕು. ಒಂದು ರೀತಿಯಲ್ಲಿ ಶಾಸನಗಳು ಸಾರ್ವಜನಿಕ ಪ್ರಕಟಣೆ. ಆದ್ದರಿಂದಲೇ ಭಾರತದ ಚರಿತ್ರೆಯ ರಚನೆಯಲ್ಲಿ ಶಾಸನಗಳ ಪಾತ್ರ ವಿಶೇಶವಾದದ್ದು. ಶಾಸನಗಳು ದೊರೆಯದೇ ಇದ್ದಿದ್ದರೆ ಇಂದು ನಮಗೆ ಅನೇಕ ಮಹತ್ವದ ವಿಚಾರಗಳೆ ದೊರೆಯುತ್ತಿರಲಿಲ್ಲ. ಶಾಸನಗಳು ತತ್ಕಾಲೀನ ಸಮಾಜದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ವಿಚಾರಗಳನ್ನು ತಿಳಿಸುವಲ್ಲಿ ಸಹಕಾರಿಯಾಗಿವೆ. ನಾಣ್ಯಗಳು, ಶಿಲ್ಪ, ತಾಮ್ರಪಟ ಮುಂತಾದವುಗಳಲ್ಲಿ ಶಾಸನಗಳ ರಚನೆಯಾಗಿವೆ. ಇವೇ ಮುಂತಾದ ವಿಚಾರಗಳನ್ನು ಕೊಪ್ಪಳದ ಶಾಸನ, ಹಲ್ಮಿಡಿ ಶಾಸನ, ಬಾದಾಮಿ ಶಾಸನ, ತಾಳಗುಂದ ಶಾಸನ, ಕುಕ್ಕ್ಯಾಲ ಶಾಸನ ಇವೇ ಮೊದಲಾದ ಶಾಸನಗಳನ್ನು ಉದಾಹರಿಸಿ ಶಾಸನಗಳ ಮಹತ್ವವನ್ನು ವಿವರಿಸಿದರು.

ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ನಂಜಯ್ಯ ಹೊಂಗನೂರು ಅವರು ಪ್ರಾಸ್ತಾವಿಕ ನುಡಿಗಳನ್ನು ಆಡುತ್ತಾ ಜೆಎಸ್‌ಎಸ್ ಸಂಸ್ಥೆಯ ಬಗ್ಗೆ ನನಗೆ ವಿಶೇಷವಾದ ಗೌರವವಿದೆ. ಪ್ರಸಾರಾಂಗಕ್ಕೆ 90 ವರ್ಷಗಳಾಗಿವೆ. ಇದುವರೆವಿಗೂ ನಿಘಂಟು ಯೋಜನೆ, ಪಠ್ಯಪುಸ್ತಕ ಯೋಜನೆ, ದತ್ತಿ ಉಪನ್ಯಾಸ ಯೋಜನೆ ಇತ್ಯಾದಿ. ಅನೇಕ ಯೋಜನೆಗಳನ್ನು ಹಳ್ಳಿಯ ಕಾಲೇಜುಗಳಿಗೂ ತಲುಪುವಂತೆ ಹಮ್ಮಿಕೊಂಡು ನಿರ್ವಹಿಸುತ್ತಾ ಬಂದಿದೆ. ಪ್ರಚಾರೋಪನ್ಯಾಸ ಮಾಲೆಯ ಕೊನೆಯ ಕಂತು ಈ ಕಾಲೇಜಿನಲ್ಲಿ ನಡೆಯುತ್ತಿರುವುದು ತುಂಬಾ ಸಂತೋಷದ ವಿಷಯ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಪ್ರೊ. ಎನ್.ಎಸ್. ತಾರಾನಾಥ್ ಅವರ ಮಾತುಗಳನ್ನು ಕೇಳುವುದೇ ಒಂದು ಸುಯೋಗ. ಅವರು ನಮ್ಮ ಕಾಲೇಜಿನ ಅನೇಕ ಮುಖ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅದರಲ್ಲೂ ಬುದ್ಧ ಅಧ್ಯಯನ ಕೇಂದ್ರಕ್ಕೆ ತಮ್ಮ ಅಮೂಲ್ಯ ಸಲಹೆ, ಸಹಕಾರ, ವಿಚಾರಗಳನ್ನು ನೀಡಿದ್ದಾರೆ. ಶಾಸನಗಳೆಂದರೆ ನನ್ನ ದೃಷ್ಟಿಯಲ್ಲಿ ಮಾಹಿತಿ. ಭಾರತದಲ್ಲಿ ಕಲ್ಲು ಮತ್ತು ತಾಮ್ರಪಟಗಳಲ್ಲಿ, ಈಜಿಪ್ಟ್‌ನಲ್ಲಿ ಮರಗಳ ಮೇಲೆ, ಚೀನಾದಲ್ಲಿ ಮೂಳೆಗಳ ಮೇಲೆ ಶಾಸನಗಳ ಬರೆವಣಿಗೆ ದೊರೆತಿವೆ ಎಂದು ಅಭಿಪ್ರಾಯಿಸಿದರು.

ವೇದಿಕೆಯ ಮೇಲೆ ಉಪಸ್ಥಿತರಿದ್ದವರು ಪ್ರಸಾರಾಂಗದ ಉಪ ನಿರ್ದೇಶಕರಾದ ಶ್ರೀಮತಿ ಕೆ ಪಿ ಲಲಿತ ಅವರು. ಸಭೆಯಲ್ಲಿ ಪ್ರಾರ್ಥಿಸಿದವರು ದ್ವಿತೀಯ ಬಿ.ಎಸ್ಸಿಯ ಕು. ನಿರಂಜನಿ ಭಾರ್ಗವ. ಸ್ವಾಗತಿಸಿದವರು ಡಾ. ಮೀನಾಕ್ಷಿ. ವಂದಿಸಿದವರು ಡಾ. ಎಂ. ಸೌಮ್ಯ. ನಿರೂಪಿಸಿದವರು ಡಾ. ಎನ್. ಮಹೇಶ್ವರಿ.

ಗೆ
ಸಂಪಾದಕರು
---------
----------

ಪ್ರಾಂಶುಪಾಲರು

ವಿಜಯ ಕರ್ನಾಟಕ 17-1-2023

# ಇತಿಹಾಸದ ನಿರ್ಮಾಣದಲ್ಲಿ ಶಾಸನಗಳ ಪಾತ್ರ ಮಹತ್ವದ್ದು




ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಮತ್ತು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರೊ.ಎನ್.ಎಸ್. ತಾರಾನಾಥ್, ಪ್ರೊ.ನಂಜಯ್ಯ ಹೊಂಗನೂರು, ಪ್ರೊ. ಜಿ.ವಿ. ಸಾಂಬಶಿವಯ್ಯ, ಕೆ.ಪಿ. ಲಲಿತ ಭಾಗವಹಿಸಿದ್ದರು.

**ವಿಕ ಸುದ್ದಿಲೋಕ** ಮೈಸೂರು

ಶಾಸನಗಳೆಂದರೆ ಬರಹಗಳನ್ನು ಓದುವ ಶಾಸ್ತ್ರ. ಈಜಿಪ್ಟ್, ಭಾರತ, ಚೀನಾ ಇವೇ ಮೊದಲಾದ ದೇಶಗಳಲ್ಲಿ ಚಾರಿತ್ರಿಕ ಸಾಮಗ್ರಿಗಳು ದೊರೆತಿವೆ ಎಂದು ಪ್ರೊ.ಎನ್.ಎಸ್. ತಾರಾನಾಥ್ ಅವರು ಅಭಿಪ್ರಾಯ ಪಟ್ಟರು.

ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಮತ್ತು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಪ್ರಚಾರೋಪನ್ಯಾಸ ಮಾಲೆಯ ಭಾಗವಾಗಿ ಏರ್ಪಡಿಸಲಾಗಿದ್ದ ಶಾಸನಗಳ ಮಹತ್ವವನ್ನು ಕುರಿತಾದ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು.

''ನಾಣ್ಯಗಳು, ಶಿಲ್ಪ, ತಾಮ್ರಪಟಗಳಲ್ಲಿ ಮೌಖಿಕ ಇತಿಹಾಸದ ಘಟನೆಗಳಷ್ಟೇ ಇರುತ್ತವೆ. ಕಾಲದ ನಿಖರತೆಯನ್ನು ಅವು ತಿಳಿಸುವುದಿಲ್ಲ. ಶಾಸನಗಳು ನಂಬಲರ್ಹವಾದ ವಿಚಾರಗಳನ್ನಷ್ಟೇ ನೀಡುತ್ತವೆ. ಆದ್ದರಿಂದ ಇತಿಹಾಸ ನಿರ್ಮಾಣದಲ್ಲಿ ಶಾಸನಗಳ ಪಾತ್ರ ಮಹತ್ವದ್ದು''ಎಂದು ತಿಳಿಸಿದರು.

''ಇತಿಹಾಸದಲ್ಲಿ ಉತ್ಪ್ರೇಕ್ಷೆಯ ಅಂಶಗಳು ಇರುವ ಸಾಧ್ಯತೆಗಳಿವೆ. ಆದೇ ಶಾಸನಗಳಲ್ಲಿ ಉತ್ಪ್ರೇಕ್ಷೆಯ ಅಂಶಗಳು ಕಂಡು ಬರುವುದಿಲ್ಲ, ಪ್ರತ್ಯಕ್ಷವಾದ ಕುರುಹುಗಳೇ ಇರುತ್ತವೆ. ಶಾಸನಗಳನ್ನು ಬರೆಸಲು ಅಧಿಕೃತ ಒಪ್ಪಿಗೆ ಇರಬೇಕು. ಒಂದು ರೀತಿಯಲ್ಲಿ ಶಾಸನಗಳು ಸಾರ್ವಜನಿಕ ಪ್ರಕಟಣೆ ಇದ್ದಂತೆ. ಆದ್ದರಿಂದಲೇ ಭಾರತದ ಚರಿತ್ರೆಯ ರಚನೆಯಲ್ಲಿ ಶಾಸನಗಳ ಪಾತ್ರ ಮಹತ್ತರವಾದದ್ದು. ಶಾಸನಗಳು ದೊರೆಯದೆ ಇದ್ದಿದ್ದರೆ ಇಂದು ನಮಗೆ ಅನೇಕ ಮಹತ್ವದ ವಿಚಾರಗಳು ದೊರೆಯುತ್ತಿರಲಿಲ್ಲ, ಶಾಸನಗಳು ಸಮಾಜದ ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ವಿಚಾರಗಳನ್ನು ತಿಳಿಸುವಲ್ಲಿ ಸಹಕಾರಿಯಾಗಿವೆ. ನಾಣ್ಯಗಳು, ಶಿಲ್ಪ, ತಾಮ್ರಪಟ ಮುಂತಾದವುಗಳಲ್ಲಿ ಶಾಸನಗಳು ರಚನೆಯಾಗಿವೆ,'' ಎಂದರು.

ಪ್ರಸಾರಾಂಗದ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು ಮಾತನಾಡಿದರು. ಅಧ್ಯಕ್ಷತೆಯನ್ನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಜಿ.ವಿ. ಸಾಂಬಶಿವಯ್ಯ ವಹಿಸಿದ್ದರು. ಪ್ರಸಾರಾಂಗದ ಉಪ ನಿರ್ದೇಶಕಿ ಕೆ.ಪಿ. ಲಲಿತ ಸೇರಿದಂತೆ ಇತರರು ಇದ್ದರು.